ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-97ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿಗೆ ಸಂದಾಯ ಮಾಡುವಲ್ಲಿ ಬರತಕ್ಕಂತಹ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ 30,00,00,000 ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಿ ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು 1-48ಕ್ಕೆ ಮುಂದೂಡಲ್ಪಟ್ಟಿತು)

(ಸಭೆಯು ಮತ್ತೆ 3.20 ಗಂಟೆಗೆ ಸಮಾವೇಶಗೊಂಡಿತು ಮಾನ್ಯ ಅಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

(ಬಿ.ಜೆ.ಪಿ.ಯ ಕೆಲವು ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದ ಕೆಲವು ಸದಸ್ಯರು, ಮತ್ತಿತರ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಡೆಸುತ್ತಿದ್ದರು)

3. ನಿಯಮ 167ರ ಮೇರೆಗೆ

ಶ್ರೀ ಜೆ.ಹೆಚ್. ಪಟೇಲ್ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯದ ಮಂಡನೆಗೆ ಕೋರಿಕೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇವತ್ತು ನಾವು ತಮ್ಮ ಹತ್ತಿರ ಬಂದು ಒಂದು ಅನಿವಾರ್ಯವಾದ ವಿಶೇಷವಾದಂತಹ ಸಂದರ್ಭದಲ್ಲಿ ಮಾನ್ಯ ಜೆ.ಹೆಚ್. ಪಟೇಲ್‌ರವರ ಮಂತ್ರಿಮಂಡಲದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ ಮಾಡುವ ನೋಟೀಸ್ ಅನ್ನು ನಿಯಮ 167ರ ಅಡಿಯಲ್ಲಿ ನಿಮ್ಮ ಕೊಠಡಿಗೆ ನಾವು ಬಂದು ಕೊಟ್ಟಿದ್ದೇವೆ. ಅದರಲ್ಲಿ ಬಿ.ಜೆ.ಪಿ. ಸದಸ್ಯರು, ಕಾಂಗ್ರೆಸ್ ಪಕ್ಷದ ಸದಸ್ಯರು, ವಾಟಾಳ್ ಪಕ್ಷದವರು, ಕರ್ನಾಟಕ ಕಾಂಗ್ರೆಸ್ ಪಕ್ಷದವರು, ಕರ್ನಾಟಕ ರೈತ ಸಂಘದವರು, ಪಕ್ಷೇತರ ಗುಂಪಿನ ಮುಖಂಡರಾದಂತಹ ಶ್ರೀ ಶಿವನಂಜಪ್ಪನವರು ಇತರ ಸದಸ್ಯರುಗಳು ಸಹಿ ಮಾಡಿ ತಮಗೆ ಕೊಟ್ಟಿದ್ದೇವೆ. ದಯಮಾಡಿ ಅದನ್ನು ತಾವು ಚರ್ಚೆಗೆ ತೆಗೆದುಕೊಳ್ಳಬೇಕು. ಅಲ್ಲಿಯವರೆಗೆ ಬೇರೆ ಯಾವುದೇ ಬಿಸಿನೆಸ್ ಮಾಡುವುದಕ್ಕೆ ತಾವು ನಿಯಮಾವಳಿಯ ಪ್ರಕಾರ ಅವಕಾಶವನ್ನು ಕೊಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನನಗೆ ನೋಟೀಸ್ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅದೇ ವಿಷಯದ ಬಗ್ಗೆ ಈಗಾಗಲೇ ನಿಯಮ 167ರ ಕೆಳಗೆ ನಾವು ನೋಟೀಸ್ ಕೊಟ್ಟಿದ್ದೇವೆ. ಅದನ್ನು ಕೊಡುವಂತಹ ಅವಶ್ಯಕತೆ ಏಕೆ ಬಂತು ಎಂದರೆ ಇದಕ್ಕೂ ಮುಂಚೆ ಈ ಸದನದಲ್ಲಿ ನಾವು ಚರ್ಚೆಗೆ ಕಾಲಾವಕಾಶವನ್ನು ಕೇಳಿದ್ದೇವೆ. ಕನಿಷ್ಟ ಪಕ್ಷ ನಾಲ್ಕೈದು ದಿವಸಗಳು ಸದನವನ್ನು ಮುಂದೂಡಿ, ಈ ಸಂದರ್ಭದಲ್ಲಿ ಅನೇಕ ವಿಷಯಗಳನ್ನು ಈ ಸದನದ ಮುಂದೆ ಇಡಬೇಕಾಗುತ್ತದೆ. ಅದಕ್ಕಾಗಿ ದಯಮಾಡಿ ಮುಂದಕ್ಕೆ ಹಾಕಿ ಎಂದು ಸರ್ಕಾರವನ್ನು ನಾವು ಕೇಳಿಕೊಂಡೆವು. ಅದಕ್ಕೆ ಅವರು ಒಪ್ಪಲಿಲ್ಲ. ಅದಕ್ಕಾಗಿ

ಇವತ್ತು ಅನಿವಾರ್ಯವಾಗಿ ನಿಯಮ 167ರ ಕೆಳಗೆ ಓಟ್ ಆಫ್ ನೊ ಕಾನ್‌ಫಿಡೆನ್ಸ್ ಮೋಷನ್ ಮೂವ್ ಮಾಡಿದ್ದೇವೆ. ತಾವು ನಾಳೆ ಅಥವಾ ನಾಡಿದ್ದು ಚರ್ಚೆಗೆ ಸಮಯವನ್ನು ನಿಗದಿ ಮಾಡಬಹುದು. ತಾವು ಎರಡು ದಿವಸ ಅಥವಾ ಮೂರು, ನಾಲ್ಕು ದಿವಸಗಳು ಕೊಡುತ್ತಿರೋ ಅದು ತಮಗೆ ಬಿಟ್ಟಿರುವಂತಹ ವಿಷಯವಾಗಿದೆ. ಅದಕ್ಕಾಗಿ ದಯಮಾಡಿ ಈ ವಿಷಯವನ್ನು ತೆಗೆದುಕೊಳ್ಳಬೇಕು. ಇದು ಅನಿವಾರ್ಯವಾದ ಇನ್ನೆವಿಟಬಲ್ ಸಿಚ್ಯುಯೇಷನ್ ಅನ್ನು ಸರ್ಕಾರದವರು ಕ್ರಿಯೇಟ್ ಮಾಡಿದ್ದಾರೆ. ಅದಕ್ಕಾಗಿ ತಾವು ದಯಮಾಡಿ ಇದನ್ನು ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇಷ್ಟು ಬೇಗ ಈ ಪ್ರಸಂಗ ಬರುತ್ತದೆಂದು ನಾವು ನಿರೀಕ್ಷಣೆ ಮಾಡಿರಲಿಲ್ಲ. ಇಂತಹ ಪರಿಸ್ಥಿತಿ ಹೊಸ ಸರ್ಕಾರ ಬಂದ ನಂತರ ಅಂದರೆ ಮಾನ್ಯ ಜೆ.ಹೆಚ್. ಪಟೇಲ್‌ರವರ ಸರ್ಕಾರ ಬಂದನಂತರ ಇಷ್ಟು ಬೇಗ ಅವಿಶ್ವಾಸ ನಿರ್ಣಯ ಬರುತ್ತದೆಂದು ನಾವು ಯಾರೂ ನಿರೀಕ್ಷೆ ಮಾಡಿರಲಿಲ್ಲ. ಆದರೆ ಇವತ್ತು ನಡೆದಿರುವಂತಹ ಪರಿಸ್ಥಿತಿಯನ್ನು ನೋಡಿದರೆ ಆಲಮಟ್ಟಿ ಜಲಾಶಯದ ಬಗ್ಗೆ ಇಡೀ ಕರ್ನಾಟಕಕ್ಕೆ ಬಹಳ ಅಪಾಯ ಬರುವಂತಹ ಪರಿಸ್ಥಿತಿ ಇರುವಾಗ ಸರ್ಕಾರ ಇದನ್ನು ತಡೆಯುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿರುವುದರಿಂದ ಸರ್ಕಾರದ ನೀತಿಯನ್ನು ವಿರೋಧಿಸುವುದಕ್ಕೆ ಬೇರೆ ಅವಕಾಶವಿರಲಿಲ್ಲ. ಇದು ಒಂದೇ ಅತೀ ಮುಖ್ಯವಾಗಿರತಕ್ಕಂಥಾದ್ದು ನಮ್ಮವರೇ ಪ್ರಧಾನಮಂತ್ರಿಗಳಾಗಿದ್ದರೂ ವಿನಾ ಕಾರಣ ಕೇಂದ್ರ ಸರ್ಕಾರದಿಂದ ಕರ್ನಾಟಕದ ಮೇಲೆ ಒಂದು ರೀತಿಯಲ್ಲಿ ಗಧಾಪ್ರಹಾರ ನಡೆಯುತ್ತಿರುವಂಥಾದ್ದು ಅತ್ಯಂತ ನೋವಿನ ಪ್ರಸಂಗವಾಗಿರುವುದರಿಂದ ಇವತ್ತು ಆಲಮಟ್ಟಿಯ ಬಗ್ಗೆ ನಡೆಯುತ್ತಿರುವಂತಹ ಈ ದೊಡ್ಡ ದುರಂತದ ಬಗ್ಗೆ ಸದನದಲ್ಲಿ ಸಮಗ್ರವಾಗಿ ಚರ್ಚೆ ನಡೆಯಬೇಕು. ಈ ಅವಿಶ್ವಾಸ ನಿರ್ಣಯದ ದುರಂತಕ್ಕೆ ಸರ್ಕಾರವೇ ನೇರವಾಗಿ ತಾವು ಮಾಡಿರುವಂತಹ ತಪ್ಪನ್ನು ಒಪ್ಪಿಕೊಂಡು ರಾಜೀನಾಮೆಯನ್ನು ಕೊಡುವಂಥಾದ್ದು ಕರ್ತವ್ಯ. ಆದರೆ ಸರ್ಕಾರ ರಾಜೀನಾಮೆಯನ್ನು ಕೊಡುವಂತಹ ರೀತಿಯಲ್ಲಿ ಇಲ್ಲದೆ ಇರುವುದರಿಂದ ನಾವು ರಾಜೀನಾಮೆಗೆ ಒತ್ತಾಯ ಮಾಡಿ ಸರ್ಕಾರದ ನೀತಿಯನ್ನು ವಿರೋಧಿಸಿ ಅವಿಶ್ವಾಸ ನಿರ್ಣಯವನ್ನು ನಾವು ಎಲ್ಲಾ ಪಕ್ಷಗಳು ಮಂಡಿಸಬೇಕಾದಂತಹ ಪ್ರಸಂಗ ಇವತ್ತು ಬಂದಿದೆ. ಆ ದೃಷ್ಟಿಯಿಂದ ಇಂತಹ ಒಂದು ಮಹತ್ವವಾದ ಪರಿಸ್ಥಿತಿ ಉಂಟಾಗುತ್ತದೆಂದು ಅಂದುಕೊಂಡಿರಲಿಲ್ಲ. ಇದು ಬಂದಿರುವಂಥಾದ್ದು ರಾಜ್ಯದ ಇತಿಹಾಸದಲ್ಲೇ ರಾಜ್ಯದ ಜನತೆಗೆ ನಡೆದಿರುವಂತಹ ಅತ್ಯಂತ ಘೋರವಾದಂತಹ ಅಪರಾಧ, ಮೋಸ ನಡೆದು ಹೋಗಿದೆ ಎಂದು ಹೇಳದೆ ವಿಧಿ ಇಲ್ಲ. ಆ ದೃಷ್ಟಿಯಿಂದ ಈ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ನಾವೆಲ್ಲರೂ ಸೇರಿ ಮಂಡಿಸುತ್ತಿದ್ದೇವೆ. ಅದನ್ನು ತಾವು ತೆಗೆದುಕೊಂಡು ಚರ್ಚೆಗೆ ಅವಕಾಶವನ್ನು ಕೊಡಬೇಕೆಂದು ನಾವು ಈಗಾಗಲೇ ಮನವಿಯನ್ನು ಮಾಡಿಕೊಂಡಿದ್ದೇವೆ. ಇದು ಯಾವಾಗ ತೆಗೆದುಕೊಳ್ಳುತ್ತೀರಿ ಎಂಬುದು ತಮಗೆ ಸೇರಿದ್ದು ಎಂದು ನಾನು ಹೇಳುತ್ತೇನೆ.

Sri H.N. Nanje Gowda : Sir, My point of order is this, Now we have given a Notice of No-confidence Motion against the Ministry. The Notice is in order. The latest we could give the Notice is before the *commencement* of the day. Earlier to that also we can give. That does not prevent us from giving the notice. My point is, when a notice is pending discussion about

the confidence of the Ministry itself, it would not be in order to transact any business of this Government until that notice is disposed of after the discussion and the Ministry is voted to office again. That is my point of order.

+ ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಅವರು ಕೊಟ್ಟಿರತಕ್ಕಂಥ ಅವಿಶ್ವಾಸ ನಿರ್ಣಯ ನಮ್ಮ ಮಂತ್ರಿಮಂಡಲದ ಮೇಲೆ ಅಥವಾ ಮಾನ್ಯ ಜೆ.ಹೆಚ್. ಪಟೇಲ್‌ರವರ ಮಂತ್ರಿಮಂಡಲ ಮೇಲೆ ಇರುವಂತಹ ಅವಿಶ್ವಾಸ ನಿರ್ಣಯದ ಬಗ್ಗೆ ನಾನು ಏನು ಮಾತನಾಡುವುದಿಲ್ಲ. ಅವರು ಕೊಟ್ಟಿರುವಂತಹ ನಿರ್ಣಯ ಚರ್ಚೆಗೆ ಬರಬೇಕಾಗಿದೆ, ಅದನ್ನು ನಾವು ಎದುರಿಸುತ್ತೇವೆ. ಗೋಡೆಯಲ್ಲಿ ಬರಹಗಳಿಗೆ ಬಹಳ ಸ್ಪಷ್ಟವಾಗಿದ್ದರೂ ಕೂಡ ಕೊಟ್ಟಿದ್ದಾರೆ. ಆದರೆ ಅವರು ಕೊಟ್ಟಿರುವಂತಹ ಸಂದರ್ಭದಲ್ಲಿ ನಿಯಮಾವಳಿಗಳನ್ನು ಅನುಸರಿಸಿ ಕೊಡಲಿ. ಅದಕ್ಕೆ ಒಂದು ನಿಯಮ ಇದೆ. ಯಾವಾಗ ಈ ಅವಿಶ್ವಾಸ ನಿರ್ಣಯವನ್ನು ಕೊಡುವುದಕ್ಕೆ ಇವರಿಗೆ ಹಕ್ಕು ಇದೆ ಎನ್ನುವಂಥಾದ್ದು ನಿಯಮ. ನಮ್ಮ ನಿಯಮ 167ರ ಅಡಿಯಲ್ಲಿ ಅವರಿಗೆ ಕೊಡುವಂತಹ ಹಕ್ಕು ಇದೆ. ಅದು ಯಾವಾಗ ಎಂದರೆ, ಈ ಮಂತ್ರಿಮಂಡಲದ ಬಗ್ಗೆ ಅವಿಶ್ವಾಸ ನಿರ್ಣಯವನ್ನು ವ್ಯಕ್ತ ಮಾಡುವಂತಹ ಒಂದು ಅವಕಾಶವನ್ನು ಬಳಸಿಕೊಳ್ಳುವುದಾದರೆ ಆ ಅವಕಾಶವನ್ನು ಈ ದಿವಸದ ಕಾರ್ಯಕ್ರಮಗಳಲ್ಲಿ ಪ್ರಶ್ನೋತ್ತರ ಕಳೆದ ಕೂಡಲೇ ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ಎರಡನೆಯದಾಗಿ ಆ ದಿವಸದಲ್ಲೇ ಅಂದರೆ ನಮ್ಮ ದಿವಸದ ಕಾರ್ಯಕಲಾಪಗಳು ಶುರುವಾಗುವುದಕ್ಕೆ ಮುಂಚೆ ಆ ಅವಿಶ್ವಾಸ ನಿರ್ಣಯದ ನೋಟೀಸನ್ನು ಕೊಡುವುದು. ಅದನ್ನು ಕೊಟ್ಟಾದ ಮೇಲೆ ಪ್ರಶ್ನೋತ್ತರವಾದ ಮೇಲೆ ಅವರು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಅವರಿಗೆ ನಿರ್ಣಯವನ್ನು ಮಂಡಿಸಲು ಅವಕಾಶವನ್ನು ಕೊಟ್ಟಾದ ಮೇಲೆ ಅವರು 23 ಜನರು ಎದ್ದು ನಿಲ್ಲಬೇಕಾಗುತ್ತದೆ. ಅದಾದನಂತರ ನೋಟೀಸ್ ಆರ್ಡರ್ ಎಂದು ಆದಮೇಲೆ ಸಮಯವನ್ನು ತಾವು ನಿಗಧಿ ಮಾಡುವಂಥಾದ್ದು, ಅದು ನಮ್ಮ ಇವತ್ತಿನ ನಿಯಮಾವಳಿಯ ಅಡಿಯಲ್ಲಿರುವಂತಹ ನಿಯಮಗಳು ಆಗಿವೆ. ಆದುದರಿಂದ ನಿಯಮ 167ರ ಅಡಿಯಲ್ಲಿ ಕೊಟ್ಟಿರುವಂಥಾದ್ದು ಅದರ ಕಾಪಿಯನ್ನು ನನಗೂ ಕೂಡ ತಮ್ಮ ಕಛೇರಿಯಿಂದ ಕಳುಹಿಸಿಕೊಟ್ಟಿದ್ದೀರಿ. ಈಗ ನನಗೆ ಮಧ್ಯಾಹ್ನ 3.10 ಗಂಟೆಗೆ ಸಿಕ್ಕಿದೆ. ನಿಯಮ 167ರ ಅಡಿಯಲ್ಲಿ ಅವರು ಕೊಟ್ಟಿದ್ದಾರೆಂದು ನಾನು ಭಾವಿಸುತ್ತೇನೆ. ಇದನ್ನು ಬಿಟ್ಟರೆ ನಿಮಗೆ ಬೇರೆ ನಿಯಮಗಳು ಯಾವುದೂ ಇಲ್ಲವಲ್ಲ. ನಿಯಮ 167ರ ಅಡಿಯಲ್ಲಿ ಕೊಡಬೇಕಾಗಿದೆ. 167ನೇ ನಿಯಮದಡಿಯಲ್ಲಿ ಏನು ಹೇಳಲಾಗಿದೆ ಎಂದರೆ

> "A motion expressing want of confidence in the council of Ministers may be made subject to the following restrictions viz., leave to make the motion must be asked for after questions and before the list of business for the day is entered upon.
>
> 2) The member asking for leave shall...
>
> ಮೆಂಬರ್ ಅಲ್ಲ, ಮೆಂಬರ್ಸ್ ಕೊಟ್ಟಿದ್ದಾರೆ.

2) The members asking for leave shall before the commencement of the sitting of the day (of that day) give to the Secretary a written notice of the motion which he proposed to move.."

ಇವತ್ತಿನ ಬೆಳಗಿನಿಂದ ನಾವು ಸದನದ ಕಲಾಪಗಳನ್ನು ನಡೆಸಿಕೊಂಡು ಬಂದಿದ್ದೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೆ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಎಂ.ಸಿ. ನಾಣಯ್ಯ : ಇಲ್ಲ, ನಾನು ಅದಕ್ಕೆ ಬರುತ್ತೇನೆ, ನಾನು ಮಾತನಾಡಿದ ಮೇಲೆ ನೀವು ಮಾತನಾಡಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) : ಇದು ಯಾವ ತರಹ, ನೋಟೀಸ್ ಕೊಡುವವರು ನೀವೇ, ಪಾಯಿಂಟ್ ಆಫ್ ಆರ್ಡರ್ ನೀವೇ ಹೇಳುತ್ತೀರಿ?

Mr. Speaker : Let him complete. Have your say? I will hear you.

ಶ್ರೀ ಎಂ.ಸಿ. ನಾಣಯ್ಯ : ನಂಜೇಗೌಡರೆ, ನಾನು ಮಾತನಾಡಿ ಆದಮೇಲೆ ನೀವು ಮಾತನಾಡಿ.

ಅಧ್ಯಕ್ಷರು : ಯಾರ್ಯಾರು ಏನೇನು ಹೇಳಬಹುದೆಂದು ಒಂದು ಕಲ್ಪನೆ ಇದೆ, ಅವರು ಹೇಳಲಿ, ಮತ್ತೆ ತಮಗೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಇವತ್ತಿನದಿವಸ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದಿದ್ದೇವೆ. ಕಾರ್ಯಕಲಾಪವನ್ನು ನಡೆಸಿಕೊಂಡು ಬಂದ ಮೇಲೆ ಅವರು ಧರಣಿ ಕುಳಿತಂಥ ಸಂದರ್ಭದಲ್ಲಿ ನಮ್ಮ ಇಲಾಖೆಗಳ ಬೇಡಿಕೆಗಳು ಯಾವುದಿತ್ತು, ಅವುಗಳನ್ನು ತಾವು ಮತಕ್ಕೆ ಹಾಕಿದ್ದೀರಿ, ಮತಕ್ಕೆ ಹಾಕಿ ಅದು ಅಂಗೀಕಾರವಾಗಿದೆ. ಅಂಗೀಕಾರವಾದ ಮೇಲೆ ಇನ್ನು ಇವತ್ತಿನ ಅಜೆಂಡಾದ ಪ್ರಕಾರ ಬಾಕಿಯಿರುವ ನಮ್ಮ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕಾಗುತ್ತದೆ. ಆದುದರಿಂದ ಎಲ್ಲಾದರೂ ಅವರ ಅವಿಶ್ವಾಸ ನಿರ್ಣಯ, ಅದು ಮೊದಲನೆಯದಾಗಿ, ಆ ದಿವಸ ಸದನ ಸೇರುವುದಕ್ಕೆ ಮೊದಲು, ಸೆಷನ್ ಪ್ರಾರಂಭವಾಗುವುದಕ್ಕೆ ಮೊದಲು- ಕೊಡಬೇಕು. ಮಾನ್ಯ ಸಭಾಧ್ಯಕ್ಷರೆ. ಆ ಮೊದಲು ಕೊಡಬೇಕು ಎನ್ನುವುದಕ್ಕೆ ಶಕ್ದರ್ ಅಂಡ್ ಕೌಲ್ ಪುಸ್ತಕದಲ್ಲಿ ಒಂದಿದೆ. ಏಕೆಂದರೆ ಈ ನಿಯಮಾವಳಿಗಳಲ್ಲಿ ಪೂರ್ತಿಯಾಗಿರುವುದು ಇಲ್ಲ. ಈ ನಿಯಮಾವಳಿಗಳಲ್ಲಿ ಪೂರ್ತಿಯಾಗಿ ಇಲ್ಲದೇ ಇದ್ದಾಗ ನಾವು ಹಿಂದಿನ ಪಾರ್ಲಿಮೆಂಟರಿ ಪ್ರಾಕ್ಟಿಸಸ್‌ಗೆ ಹೋಗಲೇ ಬೇಕಾಗುತ್ತದೆ. ಪುಟ 619.ರಲ್ಲಿ ಇರುವುದನ್ನು ಓದುತ್ತೇನೆ.

"The Expression before the commencement of the sitting means, a reasonable time before the commencement of the sitting.

ನಾವು 10 ಗಂಟೆಗೆ ಸೇರುತ್ತೇವೆಂದರೆ, 9 ಗಂಟೆಗೆ ಕೊಡಬಹುದು, 9.30 ಗಂಟೆಗೆ ಕೊಡಬಹುದು ಅಥವಾ 8.30 ಗಂಟೆಗೆ ಕೊಡಬಹುದು.

The expression before the commencement of the sitting means, a reesonable time before the commencement of the sitting. A notice of confidence motion,

whih is required to be given before the commencement of the sitting on the day, on which the matter is proposed to be raised in the House has to be given by 10.00 hours. on the day, that is an hour before the commencement of the sitting.

ಇದು ಶಕ್ದರ್ ಅಂಡ್ ಕೌಲ್‌ರವರ ಪುಸ್ತಕ, ಇದನ್ನೇ ಪ್ರತಿಯೊಂದಕ್ಕೂ ನಾವು ಲೋಕಸಭೆ ಹಾಗೂ ಎಲ್ಲಾ ಸದನಗಳಲ್ಲಿ ಬಳಸುತ್ತಿರತಕ್ಕಂಥದ್ದು. ಮಾನ್ಯ ಸಭಾಧ್ಯಕ್ಷರೇ, ಆದ್ದರಿಂದ ಅವರು ಎತ್ತಿರತಕ್ಕಂಥ ಯಾವ ಅವಿಶ್ವಾಸ ನಿರ್ಣಯವಿದೆ ಅದನ್ನು ನಾಳೆ ಈ ಸದನ ಪ್ರಾರಂಭವಾಗುವುದಕ್ಕೆ ಒಂದು ಗಂಟೆಗೆ ಮೊದಲು ತಮಗೆ ಕೊಡಲಿ, ಹಾಗೆ ಅವರಿಗೆ ಕೊಡುವುದಕ್ಕೆ ಅಧಿಕಾರವಿದೆ. ಕೊಟ್ಟನಂತರ ಪ್ರಶ್ನೋತ್ತರ ವೇಳೆ ಆಗಲಿ, ಪ್ರಶ್ನೋತ್ತರ ವೇಳೆ ನಡೆಯುವಾಗ ಹೀಗೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲವಲ್ಲ? ಪ್ರಶ್ನೋತ್ತರ ವೇಳೆ ನಡೆದೇ ನಡೆಯಬೇಕಾಗುತ್ತದೆ. ಪ್ರಶ್ನೋತ್ತರ ವೇಳೆ ಮುಗಿಯಲಿ, ನಂತರ ನಿಮ್ಮ ಲೀವ್ ಅನ್ನು ಕೇಳಲಿ ಅದಕ್ಕೆ ಇಪ್ಪತ್ತು ಸದಸ್ಯರಲ್ಲ, ಇಪ್ಪತ್ತಮೂರು ಸದಸ್ಯರಿಗಿಂತ ಜಾಸ್ತಿ ಇದ್ದಾರೆ. ಕಾಂಗ್ರೆಸ್‌ನವರು, ಬಿಜೆಪಿಯವರು ಒಟ್ಟಾರೆ ಸೇರಿ ಬಂದಿದ್ದಾರೆ ಬಹಳ ಸಂತೋಷ. ಅದೇನೊ ಕೇಂದ್ರದಲ್ಲೂ ನಮ್ಮ ಕಥೆಯನ್ನು ಮುಗಿಸುತ್ತೇವೆಂದು ಹೇಳುತ್ತಿದ್ದಾರೆ ಹೇಳಲಿ, I think let us not dilute this, ಆದುದರಿಂದ ಅವರಿಗಿರುವಂಥ ಅಧಿಕಾರವನ್ನು ಅವರು ದಯವಿಟ್ಟು ಚಲಾವಣೆ ಮಾಡಲಿ. ನಾವು ಬೇಡವೆಂದು ಹೇಳುವುದಿಲ್ಲ. ಆದರೆ ನಿಯಮಾವಳಿ ಪ್ರಕಾರ ಹೇಳುತ್ತೇನೆ, ಇವತ್ತು ಕೊಟ್ಟಿರುವ ಅವಿಶ್ವಾಸ ನಿರ್ಣಯದ ಒಂದು ನೋಟಿಸ್ ಯಾವುದಿದೆ, This is not enough. This cannot be taken up at all. This cannot be considered at all. We have got rule 167 and we have got rules and regulations in Shakdher & Kaul.

ಆದುದರಿಂದ ಆ ಒಂದು ಅಧಿಕಾರವಿದೆಯಲ್ಲಾ, ನಾಳೆ ನಾವು ಸೇರುತ್ತೇವಲ್ಲಾ, ನಾಳೆ ಸದನ ಸೇರಿದಾಗ ಈ ಕೆಲಸವನ್ನು ಮಾಡಲಿ, ನಾವು ಯಾರೂ ಬೇಡವೆಂದು ಹೇಳುವುದಿಲ್ಲ, ಸರ್ಕಾರದವರು ಅದನ್ನು ಸ್ವೀಕಾರ ಮಾಡುತ್ತೇವೆ, ನಿಮ್ಮ ವಾಕ್‌ಚಾತುರ್ಯ ಏನಿದ್ದರೂ ಅದನ್ನು ಎದುರಿಸುವುದಕ್ಕೆ ಇರುವ ಶಕ್ತಿ ಈ ಸರ್ಕಾರಕ್ಕೆ ಇದೆ, ನಾವು ಆ ಕೆಲಸವನ್ನು ಮಾಡುತ್ತೇವೆ. ಆದುದರಿಂದ ಈಗ ಕೊಟ್ಟಿರುವುದು ನಿಯಮಾವಳಿಗಳಿಗೆ ವಿರುದ್ಧವಾಗಿರುವುದರಿಂದ ಈಗ ಇದನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಇದು ನಿಯಮಾವಳಿಗೆ ವಿರುದ್ಧವಾಗಿರುವುದು, ಆದುದರಿಂದ ತಾವು ದಯವಿಟ್ಟು ಇದನ್ನು ತಿರಸ್ಕರಿಸಿ ಕಾನೂನಿನ ಪ್ರಕಾರ ಅವರಿಗೆ ನೋಟೀಸನ್ನು ಕೊಡುವುದಕ್ಕೆ ಹೇಳಿ. ಇಷ್ಟು ಮಾತುಗಳನ್ನು ಮಾತ್ರ ನಾನು ಆಡಳಿತ ಪಕ್ಷದಿಂದ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಈಗ ನೋಟಿಸನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕೊನೆಯ ಪಕ್ಷ ಒಂದು ಗಂಟೆ ಮುಂಚೆ ಕೊಡಬೇಕೆಂದು ಹೇಳಲಾಗಿದೆಯೇ ಹೊರತು, ಎಂಟು ಗಂಟೆ ಮುಂಚೆ ಕೊಡಬಾರದು, ಹನ್ನೆರಡು ಗಂಟೆಗೆ ಮುಂಚೆ ಕೊಡಬಾರದೆಂದೇನು ನಿಯಮಗಳಲ್ಲಿ ಹೇಳಲ್ಲ. ಆ ನೋಟಿಸ್ ಏನು ಸತ್ತು ಹೋಗುವುದಿಲ್ಲ. ಚರ್ಚೆಯನ್ನು ಬೇಕಾದರೆ ನಾಳೆ ತೆಗೆದುಕೊಳ್ಳಬಹುದು. ನಾನೇನು ಹೇಳುತ್ತೇನೆಂದರೆ, ಇವರ ಮೇಲೆ ಅವಿಶ್ವಾಸದ ಕತ್ತಿ ತೂಗಾಡುತ್ತಿರುವ ಕಾಲದಲ್ಲಿ ಇವರು ಇನ್ನೇನು ಬಿಸಿನೆಸ್ ಟ್ರಾನ್ಸಾಕ್ಟ್ ಮಾಡುತ್ತಾರೆ that would not

be in order. That is all my submission. Tomorrow let us take it up. This notice cannot die. If you are interpreting like that, that is not correct It will never die. The only thing is latest hour is one hour before Assembly begins.

Sri M.C. Nanaiah : On the day of the sitting.

+ ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಈಗ ಅವಿಶ್ವಾಸ ನಿರ್ಣಯದ ಒಂದು ಪ್ರಸ್ತಾವವನ್ನು ನಮ್ಮ ವಿರೋಧಪಕ್ಷದ ನಾಯಕರು ಮತ್ತು ಈ ಕಡೆಯಿರುವ ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಈ ಪ್ರಸ್ತಾವನೆಯ ಬಗ್ಗೆಯೇ ಒಂದು ಇಂಟರ್‌ಪ್ರಿಟೇಷನ್ ಅಥವಾ ವ್ಯಾಖ್ಯಾನವನ್ನು ಮಾನ್ಯ ಕಾನೂನು ಮಂತ್ರಿಗಳು ಮಾಡಿದ್ದಾರೆ. ನನಗೆ ಸ್ವಲ್ಪ ಆಶ್ಚರ್ಯವಾಗುತ್ತದೆ. ಏಕೆಂದರೆ ಅವರು ಬಹಳ ಅನುಭವಿ ಸಂಸದೀಯ ಪಟು, ಅದುದರಿಂದ ಅವಿಶ್ವಾಸ ನಿರ್ಣಯದ ಪ್ರಸ್ತಾವ ಈ ಸದನದಲ್ಲಿ ಬಂದಾಗ ಒಂದು. ಅದಕ್ಕೆ ನಿಯಮಗಳಿವೆ. ಎರಡನೆಯದು, ಅದು ಬಂದಾಗ ಈ ಸದನದ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿದೆ, ಸರ್ಕಾರ ಅದಕ್ಕೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಿದೆ, ಈ ಸದನದಲ್ಲಿ ಒಟ್ಟಿನಲ್ಲಿ ಯಾವ ರೀತಿ ಹಿಂದೆ ವ್ಯಾಖ್ಯಾನ ಮಾಡಿದ್ದಾರೆ, ಇದು ಬಹಳ ಮುಖ್ಯವಾದುದು. ಪ್ರಸ್ತಾವನೆಯ ಪ್ರಕಾರ, ನಿಯಮ 167ರ ಪ್ರಕಾರ, ಏಕೆಂದರೆ, ಕನ್ನಡ ನಮ್ಮ ಆಡಳಿತ ಭಾಷೆ ನಮ್ಮ ರಾಜ್ಯ ಭಾಷೆ ಕನ್ನಡ. ನಮ್ಮಲ್ಲಿ ಯಾವುದೇ ಒಂದು ಕಾನೂನನ್ನು ಮಾಡುವುದಿದ್ದರೂ ಕೂಡ ನಾವು ಈ ಕನ್ನಡದ ಪ್ರತಿಯನ್ನು ಮೊದಲು ಪಾಲಿಸಬೇಕು. ಇಂಗ್ಲೀಷ್ ಅಲ್ಲ. ಯಾವುದೇ ಕಾಯಿದೆ ಮಾಡುವಾಗಲೂ ಕೂಡ ಕನ್ನಡದಲ್ಲಿರತಕ್ಕ ಕಾಯಿದೆ ಅದು ಕಾಯಿದೆಯಾಗುತ್ತದೆ, ಇಂಗ್ಲೀಷ್‌ನಲ್ಲಿರತಕ್ಕದ್ದು ಕಾಯಿದೆಯಾಗುವುದಿಲ್ಲ. ಇದು ಎಲ್ಲಾ ಜನರಲ್ ಕ್ಲಾಸಸ್ ಆಕ್ಟ್ ಪ್ರಕಾರ ಮತ್ತು ಯಾವುದೇ ಒಂದು ಸಂಸದೀಯ ಪರಂಪರೆಯ ಪ್ರಕಾರ ಆಗತಕ್ಕಂಥದ್ದು. ಕನ್ನಡದಲ್ಲಿ ಏನಿದೆ? ನಾನು ಇಂಗ್ಲೀಷ್‌ನಲ್ಲಿರುವುದನ್ನು ಓದುವುದಕ್ಕೆ ಹೋಗುವುದಿಲ್ಲ. ಇಂಗ್ಲೀಷ್, ಅದು ಅಡ್ಡಾದಿಡ್ಡಿ ಭಾಷೆ. ಇಂಗ್ಲೀಷ್‌ಗೆ ಒಂದು ನಿರ್ದಿಷ್ಟ ಗುರಿಯೇ ಇಲ್ಲ. ಕನ್ನಡ ಒಂದು ನಿರ್ದಿಷ್ಟವಾದಂಥ ಭಾಷೆ ಸ್ಪಷ್ಟವಾದ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕಂಥದ್ದು ಆದುದರಿಂದ ನಾನು ಇಂಗ್ಲೀಷ್ ಭಾಷೆಯ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ನಮ್ಮಲ್ಲಿ ಕನ್ನಡದ ಪ್ರತಿ ಇದೆ. ಕನ್ನಡದ ಪ್ರತಿಯೇ ಮೂಲ ಪ್ರತಿ, ನಿಯಮಗಳ ಮೂಲ ಪ್ರತಿ ಕನ್ನಡದ ಪ್ರತಿ. ಕನ್ನಡದ ಪ್ರತಿಯಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

ಮಂತ್ರಿಮಂಡದಲ್ಲಿ ಅವಿಶ್ವಾಸವನ್ನು ಸೂಚಿಸುವ ಪ್ರಸ್ತಾವವನ್ನು ಈ ಕೆಳಗೆ ಕಂಡ ನಿರ್ಬಂಧಗಳಿಗೊಳಪಟ್ಟು ಸೂಚಿಸಬಹುದು, ಅವು ಯಾವುದೆಂದರೆ:

(ಎ) ಪ್ರಸ್ತಾವವನ್ನು ಮಂಡಿಸಲು ಅನುಮತಿಯನ್ನು ಪ್ರಶ್ನೆಗಳ ತರುವಾಯವೂ ಮತ್ತು ಆ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸುವುದಕ್ಕೆ ಮುಂಚಿತವಾಗಿಯೂ ಕೇಳಬೇಕು. ಈ ಪ್ರಸ್ತಾವವನ್ನು ಮಂಡಿಸುವುದಕ್ಕೆ, ಇವತ್ತು ತಮ್ಮ ಹತ್ತಿರ ಎತ್ತಲಿಕ್ಕೆ ಯಾವಾಗ ಅನುಮತಿಯನ್ನು ಕೇಳಬೇಕೆಂದರೆ, ಪ್ರಶ್ನೆಗಳ ತರುವಾಯ. ಇದರಲ್ಲಿ ಎರಡು ಭಾಗವಿದೆ. ಇದನ್ನು ವ್ಯಾಖ್ಯಾನ ಮಾಡಬಹುದು. ಇವತ್ತು ಪ್ರಶ್ನೆಗಳೇ ಇರಲಿಲ್ಲ. ಆದುದರಿಂದ ಪ್ರಶ್ನೆಗಳ ತರುವಾಯದ ಪ್ರಶ್ನೆಯೇ ಬರುವುದಿಲ್ಲ. ನಾವು ಬಿಸಿನೆಸ್ ಪ್ರಾರಂಭ ಮಾಡಿದ್ದೇವೆ. ನಾವು ಬೇಡಿಕೆಗಳನ್ನು ಮತಕ್ಕೆ ಹಾಕಿದ್ದೇವೆ, ಮತ ಹಾಕಿದ್ದೇವೆ ಎಂದು ತಾವು ಹೇಳಬಹುದು. ಆದರೆ ಈ ಕಂಟಿಂಜೆನ್ಸಿಗೆ ಈ ರೂಲ್ ಪ್ರೊವೈಡ್

ಮಾಡುವುದಿಲ್ಲ. ಪ್ರಶ್ನೆಗಳು ಇಲ್ಲದೇ ಒಂದು ಬಿಸಿನೆಸ್ ಆದರೆ ಯಾವ ಕಾಲದಲ್ಲಿ ಅವಿಶ್ವಾಸವನ್ನು ಸೂಚಿಸುವ ಪ್ರಸ್ತಾವವನ್ನು ಸೂಚಿಸಬಹುದೆಂದು ಇದರಲ್ಲಿ ಪ್ರಸ್ತಾಪ ಮಾಡಿಲ್ಲ. ಪ್ರಸ್ತಾವ ಇಲ್ಲದೇ ಇದ್ದ ಪಕ್ಷದಲ್ಲಿ, ಆದರೆ ಒಂದು ಕಾನೂನಿನಲ್ಲಿ ಪ್ರಶ್ನೆಗಳ ತರುವಾಯ ಎಂದು ಹೇಳಿದ ಮೇಲೆ, ಪ್ರಶ್ನೆಗಳ ತರುವಾಯವೂ ಆಗುತ್ತದೆ, because this is to be read strictly.

ಆದುದರಿಂದ ಇವತ್ತು ಪ್ರಶ್ನೆ ಬಂದಿಲ್ಲ, ಹಾಗಾದರೆ ಏನು ಮಾಡಬಹುದು ಎನ್ನುವುದು ತಮ್ಮ ವಿವೇಚನೆಗೆ ಬಿಟ್ಟಿದ್ದೇವೆ, ತಮ್ಮ ವಿವೇಚನೆಯ ಬಗ್ಗೆ ನಾವು ಪ್ರಶ್ನೆ ಮಾಡುವುದಿಲ್ಲ. ಆದರೆ ಈ ನಿಯಮಗಳಲ್ಲಿ ಇಲ್ಲದೇ ಇರತಕ್ಕಂಥ ಒಂದು ಪರಿಸ್ಥಿತಿ ಇವತ್ತು ಈ ಸದನದಲ್ಲಿ ಈಗ ಉದ್ಭವವಾಗಿದೆ. ಅದನ್ನು ಪರಿಹಾರ ಮಾಡಬೇಕಾದಂಥ ವಿವೇಚನಾ ದೃಷ್ಟಿ, ಅದು ತಮಗೆ ಬಿಟ್ಟದ್ದುದು ಅದರ ಬಗ್ಗೆ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ, ತಮ್ಮ ವಿವೇಚನೆಗೆ ಬಿಟ್ಟಿದ್ದೇವೆ. ಆದುದರಿಂದ ಮಾನ್ಯ ಸಂಸದೀಯ ಸಚಿವರು ಏನು ಈ ರೀತಿಯಾಗಿ ವ್ಯಾಖ್ಯಾನ ಮಾಡಿದ್ದಾರೆ ಅದರಲ್ಲಿ ಹುರುಳಿಲ್ಲ. ಅವರು ಕೂಡ ತಮ್ಮ ವಿವೇಚನೆಗೆ ಬಿಟ್ಟಿದ್ದರೆ, ಅಲ್ಲಿ ಸರಿ ಹೋಗುತ್ತಿತ್ತು.

ಇನ್ನು (ಬಿ) ಅನುಮತಿಯನ್ನು ಅಪೇಕ್ಷಿಸುವ ಸದಸ್ಯರು ಸಭೆಯ ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ ತಾವು ಸೂಚಿಸಬೇಕೆಂದು ಉದ್ದೇಶಿರುವ ಪ್ರಸ್ತಾವವನ್ನು ಕುರಿತು ಬರಹ ಮೂಲಕವಾಗಿ ಒಂದು ಸೂಚನಾ ಪತ್ರವನ್ನು ಕಾರ್ಯದರ್ಶಿಯವರಿಗೆ ಕೊಡತಕ್ಕದ್ದು. ಆ ದಿನದ ಉಪವೇಶನವು ಪ್ರಾರಂಭವಾಗುವುದಕ್ಕೆ ಮುಂಚೆ, it does not say one hour before or half-an-hour before ಅಥವಾ ಅರ್ಧ ನಿಮಿಷ ಮೊದಲು ಎಂದು ಪ್ರಸ್ತಾಪನೇ ಇಲ್ಲ. ಮುಂಚೆ, ಮುಂಚೆ ಎಂದರೆ, even two days earlier or a day earlier or on that day. ಆ ದಿವಸವೇ ಕೊಡಬೇಕೆಂದು ಸ್ಪಷ್ಟವಾದ ನಿರ್ದೇಶನ ಈ ನಿಯಮಗಳಲ್ಲಿ ಖಂಡಿತವಾಗಿಯೂ ಇಲ್ಲ. ಒಂದು ವೇಳೆ, ಆ ದಿವಸವೇ ಉಪವೇಶನ ಪ್ರಾರಂಭವಾಗುವುದಕ್ಕೆ ಮುಂಚೆ ಎಂದು ಒಂದು ಪ್ರಸ್ತಾಪ ಇದ್ದಿದ್ದರೆ, ನಾವು ಇಲ್ಲಿ ಕೊಟ್ಟ ಸೂಚನೆ ಸರಿಯಾಗಿರುತ್ತಿರಲಿಲ್ಲ.

ಆದರೆ ಈ ಸೂಚನೆ ಸೂಕ್ತವಾಗಿದೆ ಮತ್ತು ಈ ಸೂಚನೆಯನ್ನು ಪ್ರಶ್ನೆಯ ವೇಳೆ ಇಲ್ಲದೇ ಇದ್ದ ಕಾರಣ ನಾವು ಪ್ರಸ್ತಾಪ ಮಾಡಿದ್ದೇವೆ. ಇದರಲ್ಲಿ ಯಾರ ಆತಂಕವೂ ಇಲ್ಲ, There should be a specific prohibition. For any positive action, there should be a specific prohibition. There is absolutely no bar, absolutely no prohibition.

ಅಧ್ಯಕ್ಷರು : ಇಂಗ್ಲೀಷಿಗೆ ಹೋಗಬೇಡಿ, ದಾರಿ ತಪ್ಪಿಸುತ್ತದೆ, ಕನ್ನಡಕ್ಕೆ ಬನ್ನಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಅದು ಸರಿ ಇಲ್ಲಿ ಯಾವುದೇ ರೀತಿಯಾದಂಥ ಆತಂಕ ಯಾವುದೇ ರೀತಿಯಾದಂಥ ತಡೆ ಈ ನಿಯಮಗಳಲ್ಲಿ ಒದಗಿಸಲಾಗಿಲ್ಲ, ಆದ್ದರಿಂದ ಯಾವ ಒಂದು ಅವಿಶ್ವಾಸ ಪ್ರಸ್ತಾವವನ್ನು ಈಗ ವಿರೋಧ ಪಕ್ಷಗಳವರು ಪ್ರಸ್ತಾವನೆ ಮಾಡಿದ್ದಾರೆ, ಇದು ಕಾನೂನು ಬಾಹಿರವಾಗಿಲ್ಲ, ನಿಯಮ ಬಾಹಿರವಾಗಿಲ್ಲ, ಯಾವುದೇ ಆತಂಕ ಅಡ್ಡಿ ಈ ನಿಯಮಗಳಲ್ಲಿ ಒದಗಿಸಿಲ್ಲ. ಹಾಗಾದರೆ ಈ ಅಡ್ಡಿ ಆತಂಕವನ್ನು ಯಾರು ಮಾಡಿಲಿಕ್ಕೆ ಸಾಧ್ಯವಿದೆ. ಟ್ರೆಷರಿ ಬೆಂಚ್‌ನವರು ಮಾಡಲಿಕ್ಕೆ ಸಾಧ್ಯವಿಲ್ಲ. ಆತಂಕ ತಡೆ, ಬಂದರೆ ಅದು ತಮ್ಮಿಂದ ಬರಬೇಕು. ತಮ್ಮಿಂದ ತಡೆ, ಆತಂಕ ಬಂದರೆ ನಾವು ಕುಳಿತುಕೊಳ್ಳುತ್ತೇವೆ. ಅದಕ್ಕೆ ವಿಧೇಯರಾಗಿರುತ್ತೇವೆ. ಆದರೆ

ಅಂಥ ತಡೆ ಮತ್ತು ಆತಂಕವನ್ನು ತಾವು ಮಾಡುವುದಿಲ್ಲ ಎಂಬ ಒಂದು ವಿಶ್ವಾಸ ನಮಗೆಲ್ಲ ಕೂಡ ಇದೆ. ಆದ್ದರಿಂದ ಇದು ಒಂದು ವಿಚಾರ. ಅಧ್ಯಕ್ಷರೇ, ಇನ್ನೊಂದು ವಿಚಾರ, ಪರಂಪರೆಗೆ ಸಂಬಂಧಪಟ್ಟಂಥಾದ್ದು ಎಂದರೆ ಪ್ರಿಸೀಡೆಂಟ್‌ಗೆ ಸಂಬಂಧಪಟ್ಟಂಥ ವಿಚಾರ. ಯಾವಾಗಲೂ ಕೂಡ ಈ ಸದನದಲ್ಲಿ ಯಾವುದೇ ಘಳಿಗೆಯಲ್ಲಿ ಅವಿಶ್ವಾಸ ಪ್ರಸ್ತಾವವನ್ನು ಮಂಡಿಸಿದಾಗ ಯಾವಾಗಲೂ ಕೂಡ ಟ್ರೆಷರಿ ಬೆಂಚ್‌ನವರು ತುದಿಗಾಲ ಮೇಲೆ ನಿಂತು ಈಗಲೇ ಚರ್ಚೆಯಾಗಲೀ, ಯಾವ ನಿಯಮಗಳನ್ನೂ ಕೂಡ ನಾವು ಮುಂದೆ ತರುವುದಿಲ್ಲ ಎಂದು ಹೇಳಿದಂಥ ಉಜ್ವಲವಾದಂಥ ಪರಂಪರೆ ಈ ಸದನದಲ್ಲಿ ಇದೆ. ಯಾವುದೇ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ಪ್ರಸ್ತಾವವನ್ನು ಈ ಸದನದಲ್ಲಿ ತಂದಾಗ ಅದು ನಮ್ಮ ಕಾಲದಲ್ಲಿ ಇರಬಹುದು. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಇರಬಹುದು ಅಥವಾ ಅದಕ್ಕಿಂತ ಹಿಂದೆ ಸನ್ಮಾನ್ಯ ನಿಜಲಿಂಗಪ್ಪನವರ ಕಾಲದಲ್ಲಿ ಇರಬಹುದು, ಯಾವುದೇ ತಾಂತ್ರಿಕ ಅಡ್ಡಿ ಆತಂಕವನ್ನು ಮುಂದೆ ತಂದು, ಈ ಚರ್ಚೆ ಇವತ್ತು ಆಗಬಾರದು, ಸೂಚನೆ ಸರಿಯಿಲ್ಲ ಅದನ್ನು ನಾಳೆಗೆ ತನ್ನಿ, ಇನ್ನೊಂದು ತನ್ನಿ ಎಂದು ತಾಂತ್ರಿಕ ಆತಂಕವನ್ನು ಮುಂದೊಡ್ಡಿದಂಥ ಪ್ರಸಂಗ ಕರ್ನಾಟಕ ರಾಜ್ಯದ ಈ ವಿಧಾನ ಸಭೆಯಲ್ಲಿ ಇದ್ದರೆ, ಅದು ಮೊದಲಿಗೆ ಸಂಸದೀಯ ಸಚಿವರಾದಂಥ ನಾಣಯ್ಯನವರಿಂದ ಬಂದಿದೆಯೇ ಹೊರತು ಅನ್ಯಥಾ ಅದು ಬರಲಿಲ್ಲ. ಆದ್ದರಿಂದ ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ ತಾಂತ್ರಿಕ ಕಾರಣಗಳಿಲ್ಲ.

ಶ್ರೀ ಎಂ.ಸಿ. ನಾಣಯ್ಯ : ತಾವು ಮುಖ್ಯಮಂತ್ರಿ ಆಗಿದ್ದನ್ನು ಮರೆತು ಬಿಡಬೇಡಿ. ಮುಖ್ಯ ಮಂತ್ರಿಯಾಗಿ ಕೆಲಸ ಮಾಡಿದ್ದೀರಿ. ಮೊದಲು ಅದನ್ನು ಮರೆಯಬೇಡಿ.

ಶ್ರೀ ಎಂ. ವೀರಪ್ಪ ಮೊಯಿಲಿ: ತಾಂತ್ರಿಕ ಕಾರಣವನ್ನು ಮುಂದೊಡ್ಡತಕ್ಕಂಥ ಕೆಲಸವನ್ನು in a very sportive spirit, ಅದೂ ಕೂಡ ಗೋಡೆಯ ಮೇಲೆ ಬರೆದಿಟ್ಟಂಥ ಬರಹ ಎಂದು ಆತ್ಮ ವಿಶ್ವಾಸವುಳ್ಳಂಥ ಸಂಸದೀಯ ಸಚಿವರು ಇದಕ್ಕೆ ಹೆದರದೆ, ಬೆದರದೆ ಅವಿಶ್ವಾಸ ನಿರ್ಣಯವನ್ನು ತಕ್ಷಣ ಎದುರಿಸತಕ್ಕಂಥ ಒಂದು ಕೆಲಸ ಮಾಡಿದ್ದರೆ ಅವರಿಗೆ ಶಹಬಾಸ್‌ಗಿರಿಯನ್ನು ಹೇಳತಕ್ಕಂಥ ಕೆಲಸ ನಾವು ಇಲ್ಲಿ ಮಾಡುತ್ತೇವೆ. ಆದುದರಿಂದ ಈ ಅವಿಶ್ವಾಸ ನಿರ್ಣಯವನ್ನು ಪ್ರಸ್ತಾಪ ಮಾಡಲಿಕ್ಕೆ ಯಾವುದೇ ಆತಂಕ, ತಡೆ ಕಾನೂನಿನ ವಿರೋಧಾಭಾಸ, ಯಾವುದೇ ವ್ಯಾಖ್ಯಾನಕ್ಕೆ ಅವಕಾಶ ಖಂಡಿತವಾಗಿಯೂ ಇಲ್ಲ ಎಂದು ಹೇಳುತ್ತೇನೆ. ಮತ್ತೊಂದು ವಿಚಾರವನ್ನು ಮಾನ್ಯ ನಂಜೇಗೌಡರು ಹೇಳಿದರು, ಏಕೆಂದರೆ Appropriation Bill is an important business. It is a financial Bill, very important. ಈಗ ಸೂಚನೆ ಬಂದಿದೆ. ಸೂಚನೆ ಬರುವುದು ಬಿಡಿ. ಅವಿಶ್ವಾಸ ಪ್ರಸ್ತಾವದ ವಾಸನೆ ಬಂದರೂ ಕೂಡ, It is an ethical question. I don't say it is a legal question. It is an ethical question for the government. ಒಂದು ವೇಳೆ ಅಧ್ಯಕ್ಷರೇ ತಮಗೆ ಈ ಸಂದರ್ಭ ಬರುವುದಿಲ್ಲ. ಆದರೆ ತಮಗೆ ಗೊತ್ತಿದೆ, ಅಧ್ಯಕ್ಷರ ಮೇಲೆ ಎಲ್ಲಾದರೂ ಕೂಡ ಅವಿಶ್ವಾಸ ಬಂದಾಗ ಏನಾಗುತ್ತದೆ, Speaker will stop transacting any business. He will retire. We will allow the others to handle the situation. ಆ ತತ್ವ, ಆ ಸಿದ್ಧಾಂತ ನೈತಿಕವಾಗಿ ನಿಮ್ಮ ಸರ್ಕಾರಕ್ಕೂ ಕೂಡ ಅನ್ವಯಿಸುತ್ತದೆ. ಆದ್ದರಿಂದ ಅಪ್ರೊಪ್ರಿಯೇಷನ್ ಬಿಲ್ ಇವತ್ತು ಅಜೆಂಡಾದಲ್ಲಿ ಇದ್ದರೂ ಕೂಡ, ಅದನ್ನು ಮುಂದುವರಿಸಿಕೊಂಡು ಹೋಗದೇ ಕೂಡಲೇ ಅವಿಶ್ವಾಸ ನಿರ್ಣಯವನ್ನು ಇವತ್ತಾಗಲೀ ಅಥವಾ ನಾಳೆಯಾಗಲೀ ಆ ಪ್ರಸ್ತಾವನೆಯನ್ನು ತೆಗೆದುಕೊಳ್ಳಬೇಕಾದುದು ಸರ್ಕಾರದ ಕರ್ತವ್ಯವಾಗುತ್ತದೆ. ಅವರ ಬದ್ಧತೆ ಇರುತ್ತದೆ ಮತ್ತು ನೈತಿಕ ಹೊಣೆ ಕೂಡ ಇರುವುದರಿಂದ ತಾವು ಆ ಬಗ್ಗೆ

ಆದೇಶ ಕೊಡಲು ಆಗುವುದಿಲ್ಲ. ಆದರೆ ಅವರು ತಮ್ಮ ನೈತಿಕ ಹೊಣೆಯನ್ನು ಅರಿತು ಜವಾಬ್ದಾರಿಯಿಂದ ತಮ್ಮ ಕಾರ್ಯಭಾರವನ್ನು ಮಾಡಬೇಕಾದಂಥ ಒಂದು ಅವಶ್ಯಕತೆ, ಆ ಪರಂಪರೆ ನಮ್ಮ ಹಿಂದಿನ ಸರ್ಕಾರಗಳು ಮತ್ತು ಈ ಸದನ ಯಾವಾಗಲೂ ಕೂಡ ನಡೆಸಿಕೊಂಡು ಬಂದಂಥ ಪರಂಪರೆ, ಆ ಪರಂಪರೆಯನ್ನು ಉಳಿಸಿಕೊಳ್ಳತಕ್ಕಂಥ ಒಂದು ಕಾರ್ಯಭಾರವನ್ನು ಟ್ರೆಷರಿ ಬೆಂಚ್‌ನವರು ಮಾಡುತ್ತಾರೆ ಎಂಬ ವಿಶ್ವಾಸದಿಂದ, ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಾಜಿ ಮುಖ್ಯ ಮಂತ್ರಿಗಳಾದಂಥ ವೀರಪ್ಪ ಮೊಯಿಲಿಯವರು, ನಂಜೇಗೌಡರು ಇವರ ಬಗ್ಗೆ ಸಾಕಷ್ಟು ಅನುಭವದ ಆಧಾರದ ಮೇಲೆ ತಮಗೆ ಹೇಳಿದ್ದಾರೆ. ನಮ್ಮ ನಿಯಮಾವಳಿಗಳ ಪ್ರಕಾರ ವಿಶೇಷವಾದಂಥ ಸಂದರ್ಭದಲ್ಲಿ, ಬೇರೆ ಎಲ್ಲ ಬಿಸಿನೆಸ್ ಅನ್ನು ಬದಿಗೊತ್ತಿ, ಯಾವುದೇ ಒಂದು ಕಾರ್ಯವನ್ನು ತೆಗೆದುಕೊಳ್ಳುವುದಕ್ಕೆ ನಮ್ಮ ನಿಯಮಾವಳಿಗಳಲ್ಲಿ ಸಾರ್ವಭೌಮ ಅಧಿಕಾರವನ್ನು ನಾವು ಅಧ್ಯಕ್ಷರಿಗೆ ಕೊಟ್ಟಿದ್ದೇವೆ. ಮತ್ತು ಇವತ್ತು ಇದು ಒಂದು ವಿಶೇಷವಾದಂಥ ಸಂದರ್ಭ. ಪ್ರತಿಪಕ್ಷಗಳ ಕೊನೆಯ ಒಂದು ಅಸ್ತ್ರ ಇದು. ಅದನ್ನು ನಾವು ಇವತ್ತು ಪ್ರಯೋಗ ಮಾಡುತ್ತಿರುವಂಥ ಕಾಲದಲ್ಲಿ ಸಹಜವಾಗಿ ತಾವು ಯಾವ ಸಮಯದಲ್ಲಿ ಈ ಚರ್ಚೆಯನ್ನು ತೆಗೆದುಕೊಳ್ಳಬೇಕು ಎನ್ನುವಂಥಾದ್ದಕ್ಕೆ ತಮಗೆ ಸಂಪೂರ್ಣ ಅಧಿಕಾರ ಇದೆ, ತಾವು ಏನು ಹೇಳುತ್ತೀರಿ, ಅದಕ್ಕೆ ನಾವು ತಲೆಬಾಗುತ್ತೇವೆ, ಅದರಲ್ಲಿ ಎರಡು ಮಾತಿಲ್ಲ. ಸನ್ಮಾನ್ಯ ವೀರಪ್ಪ ಮೊಯ್ಲಿಯವರು ಮತ್ತು ನಂಜೇಗೌಡರು ಹೇಳಿದಂತೆ ಆಡಳಿತ ಪಕ್ಷದ ಮೇಲೆ ಒಂದು ಸಂದರ್ಭದಲ್ಲಿ ಪ್ರತಿಪಕ್ಷಗಳು, ಅದೂ ಈ ಸಂಖ್ಯೆಯಲ್ಲಿರುವಂಥ ಕಾಲದಲ್ಲಿ ಅವಿಶ್ವಾಸ ನಿರ್ಣಯವನ್ನು ಮಾಡಿದಾಗ ಯಾವುದೇ ಕಾರಣಕ್ಕೆ ಬೇರೆ ಬಿಸಿನೆಸ್ ಅನ್ನು ನಡೆಸುವುದಕ್ಕೆ ನೈತಿಕ ಹಕ್ಕು ನಮಗೆ ಇಲ್ಲ. ಮೊದಲು ಈ ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಯಾಗಲಿ. ಆಮೇಲೆ ಉಳಿದಂಥಾದ್ದನ್ನು ನೋಡೋಣ ಎಂದು ಸಹಜವಾಗಿ ಲಾ ಮಿನಿಸ್ಟರ್‌ರವರು ಹೇಳುತ್ತಾರೆ ಎಂದು ನಾವು ನಿರೀಕ್ಷೆ ಮಾಡಿದ್ದೆವು. ಮತ್ತು ಇವತ್ತು ನಿಮ್ಮ ಉದ್ದೇಶವೂ ಸಹ, ನಾವು ವೆಲ್‌ನಲ್ಲಿ ಇದ್ದಾಗ ಯಾವ ರೀತಿ ಡಿಮ್ಯಾಂಡ್‌ಗಳನ್ನು ತರಾತುರಿಯಲ್ಲಿ ಪಾಸ್ ಮಾಡಿಕೊಳ್ಳುವಂಥ ಒಂದು ಅವಸರವನ್ನು ತಾವು ತೋರಿಸಿದಿರಿ, ಅದೇ ರೀತಿ ಅಪ್ರೋಪ್ರಿಯೇಷನ್ ಬಿಲ್ಲನ್ನು ಸಹ ನೀವು ಪಾಸ್ ಮಾಡಿಕೊಂಡು ಹೋಗಲು ನೀವು ಸಿದ್ಧರಾಗಿದ್ದಿರಿ ಎನ್ನುವುದು ನಮಗೆಲ್ಲ ಗೊತ್ತಿರುವಂಥ ಸಂಗತಿ.

ಆದ್ದರಿಂದ ಇದನ್ನು ಯಾವ ಸಮಯದಲ್ಲಿ ತೆಗೆದು ಕೊಳ್ಳಬೇಕು ಎನ್ನುವುದು ಸನ್ಮಾನ್ಯ ಅಧ್ಯಕ್ಷರಿಗೆ ಬಿಟ್ಟಿದ್ದು. ಆದರೆ ಸಂಸದೀಯ ಸಚಿವರಾಗಿರತಕ್ಕಂಥ ಸನ್ಮಾನ್ಯ ನಾಣಯ್ಯನವರಂಥ ಹಿರಿಯರು ಎದ್ದು ನಿಂತುಕೊಂಡು, ಅಧ್ಯಕ್ಷರು ಇದನ್ನು ಯಾವುದೇ ಸಂದರ್ಭದಲ್ಲಿ ತೆಗೆದುಕೊಂಡರೂ ನಾವು ಇದಕ್ಕೆ ಸಿದ್ಧರಿದ್ದೇವೆ ಎಂದು ಹೇಳಿದಾಗ, ಆಗ ಬಹುಶಃ ನಾವು ನಿಜವಾಗಿ ನಿಮ್ಮ ಒಂದು ಸ್ಥೈರ್ಯವನ್ನು, ಧೈರ್ಯವನ್ನು ಮೆಚ್ಚಬಹುದಾಗಿತ್ತು. ಆದರೆ ಹೇಗೋ, ಏನೋ, ತಾವು ಒಂದು ಗೊಂದಲದಲ್ಲಿ ಇದ್ದುದನ್ನು ಹೇಳಿದ್ದೀರಿ, ಪರವಾಗಿಲ್ಲ. ಆದರೆ ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ, ತಮಗೆ ಸೂಕ್ತವಾದಂಥ ಒಂದು ಸಮಯವನ್ನು ನಿಶ್ಚಯ ಮಾಡಿ, ಬೇರೆ ಯಾವುದೇ ಬಿಸಿನೆಸ್ ಅನ್ನು ಮಾಡುವುದಕ್ಕೆ ಅವಕಾಶ ಮಾಡಿಕೊಡದೇ ನಾವು ಕೊಟ್ಟಿರುವಂಥ ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕೆ ತಾವು ಅವಕಾಶ

ಮಾಡಿಕೊಡಬೇಕು ಎಂದು ಹೇಳಿ ನಾನು ಅತ್ಯಂತ ವಿನಯದಿಂದ ತಮ್ಮಲ್ಲಿ ವಿನಂತಿ ಮಾಡುತ್ತೇನೆ.

+ ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗ ಅವಿಶ್ವಾಸ ಗೊತ್ತುವಳಿಯ ನಿರ್ಣಯ ತರತಕ್ಕಂಥಾದ್ದು ದಿಢೀರಣೆ ಆಗುವಂಥ ಪ್ರಸಂಗ ಆಗುವುದಿಲ್ಲ. ನೈತಿಕ ವಿಚಾರಗಳನ್ನು ಪ್ರಸ್ತಾಪ ಮಾಡಬೇಕಾಗಿದ್ದರೆ ನಿಯಮಾವಳಿಗಳನ್ನು ರಚನೆ ಮಾಡಿಕೊಳ್ಳಬೇಕಾದಂಥ ಅಗತ್ಯಕೂಡ ಇರಲಿಲ್ಲ. ನೈತಿಕತೆ ಅಂತಿಮವಾಗಿರತಕ್ಕಂಥ ನಮ್ಮೆಲ್ಲರ ಗುರಿಯೂ ಆಗಿರಬೇಕು, ನಮ್ಮ ನಡವಳಿಕೆಗಳಲ್ಲಿ ಮುಖ್ಯವಾಗಿ ಇರತಕ್ಕಂಥ ಬುನಾದಿಯೂ ಆಗಿರಬೇಕು. ಆದರೆ ಆ ನೈತಿಕ ಚೌಕಟ್ಟಿನ್ನು ನಿರ್ಮಾಮ ಮಾಡುವಾಗ ವಿಧಿಗಳನ್ನು ನಿಯಮಾವಳಿಗಳನ್ನು ರಚಿಸಿರತಕ್ಕಂಥಾದ್ದು, ನಮ್ಮ ದೈನಂದಿನ ವ್ಯವಹಾರಗಳು ಸುಸೂತ್ರವಾಗಿ ನಡೆಯಬೇಕು ಎನ್ನುವಂಥ ಕಾರಣಕ್ಕಾಗಿ, ಈ ಸದನ ತನ್ನ ಸಮಷ್ಟಿ ವಿವೇಕದಿಂದ ಇಂಥ ನಿಯಮಾವಳಿಗಳನ್ನು ರಚನೆ ಮಾಡಿರತಕ್ಕಂಥಾದ್ದು. ಯಾವುದೋ ಒಂದು ಕಾರಣಕ್ಕಾಗಿ, ಪಟ್ಟಿಗೆ ಪ್ರತಿಪಟ್ಟು ಎನ್ನುವಂಥ ರೀತಿಯಲ್ಲಿ, ಸದನದಲ್ಲಿ ಸರ್ಕಾರ ಯಾವ ಉತ್ತರವನ್ನು ಕೊಡಬೇಕು ಎಂದು ಅವರು ಬಯಸುತ್ತಾರೆಯೋ ಆ ಉತ್ತರ ಕೇಳಲೂ ಕೂಡ ತಯಾರಾಗಲಾರದಂಥ ರೀತಿಯಲ್ಲಿ ತಾವೇ ಬಾವಿಯಲ್ಲಿ ಬಂದು ಕೂಡುತ್ತಾರೆ ಮತ್ತು ಈ ವಿಚಾರದಲ್ಲಿ ಸದನದ ಕಾರ್ಯಕಲಾಪ ಆಗುವಂತೆ ತಮಗೆ ಸಹಕಾರವನ್ನೂ ಕೊಡುವುದಿಲ್ಲ ಮತ್ತು ಆ ಸಂದರ್ಭದಲ್ಲಿ ಆಗುವಂಥ ದೈನಂದಿನ ಕಾರ್ಯಕ್ರಮಗಳು ನಡೆಯಬೇಕು ಎಂದು ಹೇಳಿ ಕೆಲಸ ಪ್ರಾರಂಭ ಮಾಡಿದ ನಂತರ ಅವಿಶ್ವಾಸವನ್ನು ತರುತ್ತಿದ್ದೇವೆ ಎನ್ನುವಂಥಾದ್ದನ್ನು ಹೇಳಿ, ಅದರ ಮೇಲೆ ನೈತಿಕ ಕಾರಣಗಳಿಗಾಗಿ ನೀವು ಅವಿಶ್ವಾಸವನ್ನು ಒಪ್ಪಿಕೊಳ್ಳಬೇಕು ಎನ್ನುವುದಾಗಿದ್ದರೆ, ಯಾವುದು ನೈತಿಕತೆ? ಅದು ಒಂದು ಸಾಪೇಕ್ಷವಾದಂಥ ವಿಚಾರ. ನಿಮ್ಮ ಮೂಗಿನ ನೇರಕ್ಕೆ ಆಗುವಂಥ ರಾಜಕೀಯ ವಿಚಾರಗಳೇ ನೈತಿಕತೆ ಆಗುವುದು ಆಗಿದ್ದರೆ, ನಾವು ಈ ನಿಯಮಾವಳಿಗಳನ್ನು ರಚನೆ ಮಾಡಿಕೊಳ್ಳತಕ್ಕಂಥಾದ್ದಾಗಲೀ ನಮ್ಮ ದೃಷ್ಟಿಯಿಂದ ಇರತಕ್ಕಂಥ ನೈತಿಕತೆ ಯಾವುದು? ಬಹುಮತ ಹೊಂದಿರತಕ್ಕಂಥ ಒಂದು ಸರ್ಕಾರ ತನ್ನದೇ ಆಗಿರತಕ್ಕಂಥ ರೀತಿಯಲ್ಲಿ ಆಡಳಿತವನ್ನು ಮಾಡುತ್ತದೆ. ಅಲ್ಪ ಸಂಖ್ಯಾತರಾಗಿರತಕ್ಕಂಥ ವಿರೋಧ ಪಕ್ಷಗಳು ತಮ್ಮ ಹೇಳಿಕೆಗಳನ್ನು ಪ್ರತಿಪಾದಿಸಬೇಕಾಗಿರತಕ್ಕಂಥಾದ್ದೂ ಅವರ ಕರ್ತವ್ಯವಾಗಿದೆ. ಅದರ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಮುಖ್ಯ ಮಂತ್ರಿಗಳು ಈ ದಿವಸ ಬಂದಿಲ್ಲ ಎನ್ನುವಂಥ ಒಂದೇ ಒಂದು ಕಾರಣಕ್ಕಾಗಿ ಅದರಿಂದ ರಾಜ್ಯದ ಹಿತಾಸಕ್ತಿಗೆ ಧಕ್ಕೆ ಯಾಗುತ್ತದೆಯೋ ಅಥವ ಇಲ್ಲವೋ, ಮುಖ್ಯಮಂತ್ರಿಗಳು ಈ ಕೂಡಲೇ ಬಂದು ಉತ್ತರವನ್ನು ಕೊಡಬೇಕಾಗಿತ್ತು ಈ ವಿಚಾರದಲ್ಲಿ ಸರ್ಕಾರ ತನ್ನದೇ ಆಗಿರತಕ್ಕಂಥ ವಿಷಯವನ್ನು ಹೇಳುವ ಸಂದರ್ಭದಲ್ಲಿ ನೈತಿಕತೆಯನ್ನು ಮತ್ತು ನಿಯಮಾವಳಿಗಳನ್ನು ಭಂಗ ಮಾಡುವುದಕ್ಕಾಗಿ ಉಪಯೋಗಿಸಿಕೊಳ್ಳತಕ್ಕಂಥ ಆಸ್ತ್ರ ಏನಿದೆ, ಇದು ಸಮಂಜಸವಾದುದಲ್ಲ. ಇಲ್ಲಿ ನೀವೆಲ್ಲಾ ಹಿರಿಯರಾಗಿರತಕ್ಕಂಥವರು, ಶಾಸನ ಸಭೆಗಳಲ್ಲಿ ಸುಮಾರು 20-25 ವರ್ಷ ಸೇವೆ ಮಾಡಿದಂಥ ಹಿರಿಯರೆಲ್ಲಾ ಇದ್ದೀರಿ. ನಮಗೆ ಮಾರ್ಗದರ್ಶನ ಮಾಡಬೇಕಾದಂಥ ಅಗತ್ಯ ಇರುವುದರಿಂದ, ದಯವಿಟ್ಟು ಈ ಅವಿಶ್ವಾಸ ಗೊತ್ತುವಳಿಯ ಹೊಸ ತಂತ್ರವನ್ನು ಉಪಯೋಗಿಸಿಕೊಳ್ಳತಕ್ಕಂಥಾದ್ದು ಅಲ್ಲ. ಮತ್ತು ಈಗ ನಾವು ಮಾಡಿದಂಥಾದ್ದಕ್ಕೆ ಮತ್ತೊಂದು ಹೊಸ ತಂತ್ರವಾಗಿ ಮಾಡಿ ಈರಿ ರೀತಿ ಅಧ್ಯಕ್ಷರಿಗೂ ಕೂಡ ಅನಾವಶ್ಯಕವಾದಂಥ ಮುಜುಗರ ಉಂಟು ಮಾಡತಕ್ಕಂಥಾದ್ದು ಕೂಡ ಸಮಂಜಸವಲ್ಲ. ದಯವಿಟ್ಟು ಅವರೇ ಇದನ್ನು ವಾಪಸ್ಸು

ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ ಮತ್ತು ನಮ್ಮ ಸದನದ ಅನೇಕ ದೈನಂದಿನ ಕಾರ್ಯಕಲಾಪಗಳಿಗೆ ತಾವು ಅವಕಾಶ ಮಾಡಿಕೊಡಿ. ಆ ವಿಚಾರದಲ್ಲಿ ನಾವು ಉತ್ತರವನ್ನು ಕೂಡಲೂ ಕೂಡ ತಯಾರಿದ್ದೇವೆ.

3.50 ಪಿಎಂ

ಅಧ್ಯಕ್ಷರು : ಮಾನ್ಯ ನಂಜೇಗೌಡರು ಪ್ರಸ್ತಾಪ ಮಾಡಿದಂತಹ ವಿಚಾರವನ್ನು ನಾನು ಗಮನಿಸಿದ್ದೇನೆ. ಅದಕ್ಕೆ ಬದಲಾಗಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಂಡಿಸಿದ ವಾದವನ್ನೂ ಸಹ ನಾನು ಕೇಳಿದ್ದೇನೆ. ಮಾನ್ಯ ವೀರಪ್ಪಮೊಯಿಲಿಯವರು ಹೇಳಿದಂತಹ ಮಾತುಗಳನ್ನು ಕೇಳಿದ್ದೇನೆ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ತಂತ್ರ ಪ್ರತಿ ತಂತ್ರ, ಮಾತು ಪ್ರತಿ ಮಾತು ಇವೆಲ್ಲಾ ನಿಮ್ಮ ಮತ್ತು ಅವರ ಮಧ್ಯೆ ಇರಬೇಕಾಗಿರುತ್ತದೆ. ತಾವುಗಳು ಮಾತು ಮಾತಿಗೂ ಸರ್ವಾಧಿಕಾರ ನನ್ನ ಕಡೆ ಇರುತ್ತದೆ ಎಂದು ಹೇಳಿದ್ದೀರಿ, ಅಧ್ಯಕ್ಷ ಸ್ಥಾನದಲ್ಲಿ ಕುಳಿತುಕೊಳ್ಳುವಂತಹ ಯಾವುದೇ ವ್ಯಕ್ತಿಗೆ ಈ ಸದನ ಕೊಡುವಂತಹ ಪರಮೋಚ್ಚ ಅಧಿಕಾರ ಏನು ಇರುತ್ತದೆ, ಇದು ವಿಶ್ವಾಸ ಮತ್ತು ನಂಬಿಕೆ ಎನ್ನುವಂತಹ ಸ್ತಂಭದ ಆಧಾರದ ಮೇಲೆ ಇರುತ್ತದೆಯೇ ಹೊರತು ಮನಸೋ ಇಚ್ಛೆ ವಿನಿಯೋಗಿಸುವಂತಹ ಸರ್ವಾಧಿಕಾರವಾಗಿರುವುದಿಲ್ಲ. ನೈತಿಕತೆಯ ಪ್ರಶ್ನೆ ಬಂದಾಗ ಮಾನ್ಯ ಪ್ರಕಾಶ್‌ರವರು ಹೇಳಿದಂತಹ ಮಾತನ್ನು ಸಹ ನಾನು ಕೇಳಿದ್ದೇನೆ. ನೈತಿಕತೆ ಮತ್ತು ನಿಯಮಗಳನ್ನು ಸಂದರ್ಭಕ್ಕೆ ಅನುಸಾರವಾಗಿ ತಾವು ವಾದವನ್ನು ಮಂಡಿಸುವಾಗ ಬಳಸುವಂಥಾದ್ದು ಸರಿಯೇ, ಆದರೆ ಅವು ನಮ್ಮ ಚಾಲನೆಯನ್ನು ನಿಗ್ರಹಿಸುವಂತಹ ಒಂದು ವಿಧಿಗಳಾಗಿರಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ನಾನು ನೋಟೀಸ್ ಅನ್ನು ಸ್ವೀಕಾರ ಮಾಡಿದ್ದು 3.10 ನಿಮಿಷಕ್ಕೆ ಅದು ಯಾವಾಗ ಬರಬೇಕಾಗಿತ್ತು ಅದನ್ನು ಯಾವಾಗ ತೆಗೆದುಕೊಳ್ಳಬೇಕಾಗಿತ್ತು, ಎಂಬ ವಿಚಾರಕ್ಕೆ ನಾನು ಈಗ ಹೋಗುತ್ತಾ ಇಲ್ಲ. ನಾನು ತಮ್ಮೆಲ್ಲರನ್ನು ವಿನಂತಿಸಿಕೊಳ್ಳುವುದು ಇಷ್ಟೆ, ಇನ್ನು ಈಗ 4.10 ಗಂಟೆಯಾಗಿದೆ. ಈಗ 20 ನಿಮಿಷಗಳ ಕಾಲ ಸಭೆಯನ್ನು ಮುಂದೂಡಿ ನಾನು ಕಾರ್ಯದರ್ಶಿಯವರ ಜೊತೆಯಲ್ಲಿ ಚರ್ಚೆ ಮಾಡಬೇಕು. ನಾನು ಮುಂದೆ ಯಾವ ರೀತಿಯಲ್ಲಿ ಹೆಜ್ಜೆ ಇಡಬೇಕೆನ್ನುವಂತಹ ವಿಚಾರದಲ್ಲಿ ಏಕಾಏಕಿ ಇಲ್ಲಿ ಕುಳಿತುಕೊಂಡು ನಿರ್ಣಯವನ್ನು ತೆಗೆದುಕೊಳ್ಳುವಂತಹ ಸ್ಥಿತಿಯಲ್ಲಿ ನಾನು ಇಲ್ಲ, ನನಗೆ ಅನುಭವದ ಕೊರತೆ ಇದೆ. ಆತುರ ಪಡುತ್ತೇನೇನೊ ಎಂಬ ಆತಂಕ ಕೂಡ ಇದೆ. ಆದುದರಿಂದ ನಾನು ಮಾಡುವಂತಹ ಕೆಲಸ ಸದನದಲ್ಲಿ ಒಂದು ಹೊಸ ಪದ್ಧತಿಯನ್ನು ಸೃಷ್ಟಿ ಮಾಡುವುದಕ್ಕೆ ಕೂಡ ಆಗುವುದಿಲ್ಲ. ಆದುದರಿಂದ ಸಭೆಯನ್ನು 20 ನಿಮಿಷಗಳ ತರುವಾಯ ಪುನಃ ಸೇರೋಣ. ದಯಮಾಡಿ ಎಲ್ಲರೂ ಸಹಕರಿಸಬೇಕು. ಈಗ ಸಭೆಯನ್ನು 20 ನಿಮಿಷಗಳ ಕಾಲ ಮುಂದೂಡುತ್ತೇನೆ.

(ಸಭೆಯು ಗಂಟೆ 3.53ಕ್ಕೆ ಮುಕ್ತಾಯಗೊಂಡು ಮತ್ತೆ 20 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು).

(ಶ್ರೀ ಎಸ್. ರಮೇಶ್ ಕುಮಾರ್‌ರವರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

(ಮಾನ್ಯ ವಿರೋಧಪಕ್ಷದ ಸದಸ್ಯರು ಮಾನ್ಯ ಅಧ್ಯಕ್ಷರ ಪೀಠದ ಮುಂದಿನ ಆವರಣದಲ್ಲಿ ಧರಣಿ ಕುಳಿತಿದ್ದರು)

ಅಧ್ಯಕ್ಷರು : ಮಾನ್ಯ ಹಿರಿಯ ಸದಸ್ಯರಾದ ವೀರಪ್ಪಮೊಯಿಲಿಯವರೂ ಮತ್ತು ಮಾನ್ಯ ನಂಜೇಗೌಡರು ಪ್ರಧಾನವಾಗಿ ಮುಂದಿನ ಕಲಾಪ ನಡೆಯತಕ್ಕ ವಿಚಾರದಲ್ಲಿ ನೈತಿಕತೆಯ ಬಗ್ಗೆ ಪ್ರಸ್ತಾಪ ಮಾಡಿದ್ದಕ್ಕಾಗಿ ನಾನು ಸ್ವಲ್ಪ ಮುಜುಗರದಲ್ಲಿದ್ದೇ ಅದಕ್ಕೆ ನಾನು ನನ್ನ ಕಾರ್ಯದರ್ಶಿಯವರಿಂದ ವಿವರಗಳನ್ನು ಪಡೆದುಕೊಂಡಿದ್ದೇನೆ. ಈ ಅಧಿವೇಶನ ಜುಲೈ ತಿಂಗಳ 4 ರಂದು ಪ್ರಾರಂಭವಾದಮೇಲೆ 42 ದಿನಗಳ ಅವಧಿಗೆ ಸುಮಾರು 29 ಅಧಿವೇಶನಗಳನ್ನು ನಾವು ನಡೆಸಿದ್ದೇವೆ. ನಾಳೆಗೆ ನಮ್ಮ ಅಧಿವೇಶನ ಮುಕ್ತಾಯವಾಗಬೇಕಾಗಿತ್ತು. ಈ ಹಂತದಲ್ಲಿ ಈ ಸೂಚನೆಯನ್ನು ತಾವು ಕೊಟ್ಟಿದ್ದೀರಿ. ಈ ರೀತಿ ಸೂಚನೆಯನ್ನು ಕೊಡತಕ್ಕ ಹಕ್ಕು ತಮಗಿದೆ. ಯಾವ ಹಂತದಲ್ಲಾದರೂ ತಾವು ಕೊಡಬಹುದು. ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ, ಆದರೆ ನಮ್ಮ ಮನಸ್ಸಿಗೆ ಮನವರಿಕೆ ಆಗಬೇಕಾಗಿತ್ತು. ಯಾವುದಾದರೂ ಒಂದು ಆತಂಕಕಾರಿ ಸ್ಥಿತಿ ಇದ್ದು ಅದು ನನ್ನ ಸಹಾಯದಿಂದ ಪರೋಕ್ಷವಾಗಿ ಯಾವುದಾದರೂ ಒಂದು ಕಡೆಗೆ ನಾನು ವಾಲಿದಂತೆ ತೀರ್ಮಾನವನ್ನು ಕೊಟ್ಟಂತಾಗುತ್ತದೆಯೇ ಎಂಬುದು ನನ್ನ ಮನಸ್ಸಿಗೆ ಸಮಾಧಾನ ಆಗಿದೆ. ಈಗ ಅವಿಶ್ವಾಸ ನಿರ್ಣಯವನ್ನು ತಾವು ಏನು ನನ್ನ ಕಛೇರಿಗೆ ಕೊಟ್ಟಿದ್ದೀರಿ ಅದು ಈಗ ನನ್ನ ಕಛೇರಿಗೆ ಬಂದಿದೆ. ನಾಳೆಯ ದಿವಸ ಅದನ್ನು ನಾನು ಈ ಸಭೆಯ ಮುಂದಿಟ್ಟು ಕಾನೂನು ಪ್ರಕಾರ ಅದನ್ನು ಯಾವಾಗ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವ ಬಗ್ಗೆ ಎರಡೂ ಕಡೆಯವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಂದು ದಿನವನ್ನು ಗೊತ್ತುಪಡಿಸುತ್ತೇನೆ. ಈಗ ಧನವಿನಿಯೋಗ ಮಸೂದೆಯನ್ನು ತೆಗೆದುಕೊಳ್ಳುವುದಕ್ಕೆ ನನಗೆ ಯಾವುದೇ ನಿರ್ಬಂಧವೂ ಇರುವುದಿಲ್ಲ. ಕಲಾಪವನ್ನು ನಡೆಸುವುದಕ್ಕೆ ನಾನು ನಿಶ್ಚಯಿಸಿದ್ದೇನೆ. ಧನ ವಿನಿಯೋಗ ಮಸೂದೆಯನ್ನು ನಾನು ಈಗ ಕೈಗೆ ಎತ್ತಿಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಬೇಡಿ ಎಂದು ಹೇಳುತ್ತಿದ್ದೇವೆ. ಅದನ್ನು ತೆಗೆದುಕೊಳ್ಳುವುದು ಬೇಡ ಒಳ್ಳೆಯ ಸಂಪ್ರದಾಯವಲ್ಲ, ಅದು ಸರಿಯಲ್ಲ. ಈ ಸಭೆಗೆ ನೈತಿಕ ಹಕ್ಕಿಲ್ಲ, ಇದು ಒಳ್ಳೆಯದಲ್ಲ, ಇಂಥ ಇತಿಹಾಸ ಎಂದೂ ನಡೆದಿಲ್ಲ, ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ಈ ಕೆಲಸವನ್ನು ಮಾಡಬೇಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇದು ನೈತಿಕತೆಯ ಕುರುಹೇ? ಅಧ್ಯಕ್ಷರು ರೂಲಿಂಗ್‌ನ್ನು ಕೊಟ್ಟನಂತರ....

ಶ್ರೀಸಿದ್ಧರಾಮಯ್ಯ : ನಿಮಗೆ ರಾಜ್ಯಾಂಗ ಕಾನೂನು, ಕಟ್ಟಳೆ, ನಿಯಮಾವಳಿಗಳು ಏನೂ ಇಲ್ಲವೆ?

ಶಾಸನ ರಚನೆ

(ಎ) ವಿಧೇಯಕಗಳನ್ನು ಮಂಡಿಸುವುದು

(i) ಕರ್ನಾಟಕ ಧನವಿನಿಯೋಗ (ನಂ. 2) ವಿಧೇಯಕ, 1996

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯ ಮಂತ್ರಿಗಳು ಮತ್ತು ಹಣಕಾಸು, ಯೋಜನಾ, ಹಾಗೂ ಕಾರ್ಮಿಕ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, 1996ರ ಕರ್ನಾಟಕ